ವಿದ್ಯುತ್ ದೀಪ ಬಂದ ಮೇಲೆ ಕರೆಂಟಿನ ಪ್ರಖರ ಪ್ರಕಾಶದಲ್ಲಿ ಕಪ್ಪಡಿಗೆಮನೆ ತನ್ನ ನಿಗೂಢತೆಯನ್ನು ಕಳೆದುಕೊಂಡು ಬೆಳಕಿಗೆ ತೆರೆದುಕೊಂಡಿದೆ. ಹೊಸ ಬೆಳಕಿಗೆ ಹೆದರಿ ಬಿಳಿಮಂಡೆಯ ರಕ್ಕಸಿ ಎಲ್ಲೋ ಮಾಯವಾಗಿಬಿಟ್ಟಿದ್ದಾಳೆ. ಈಗಿನ ಮಕ್ಕಳ್ಯಾರೂ ಅವಳಿಗೆ ಹೆದರುವುದು ಬಿಡಿ, ಅವಳ ಇರುವಿಕೆಯನ್ನೂ ನಂಬುತ್ತಿಲ್ಲ. ಅಲ್ಲೀಗ ಹಳೆಯ ಒಲೆ ಇಲ್ಲ. ಗಣೆಯ ಮೇಲೆ ಹರಗಿದ ಕೆಂಪು ಮಡಿ ಸೀರೆಯೂ ಇಲ್ಲ. ಗೋಡೆಗಳೆಲ್ಲಾ ಬಿಲಗಳನ್ನು ಮುಚ್ಚಿಕೊಂಡು, ಮೈಗೆ ಹೊಸ ಪ್ಲಾಸ್ಟರ್ ಮಾಡಿಸಿಕೊಂಡು ಸುಣ್ಣ ಬಣ್ಣದೊಂದಿಗೆ ನೀಟಾಗಿ ಕಂಗೊಳಿಸುತ್ತಿವೆ. ಹಳೆಯ ಹಂಡೆ ಮಣ್ಣಿನ ಬಾನಿಗಳೆಲ್ಲಾ ಮಾಯವಾಗಿ ಅವುಗಳ ಜಾಗದಲ್ಲಿ ಹೊಳೆಯುವ ಸ್ಟೀಲ್ ಪಾತ್ರೆಗಳು ಮಿನುಗುತ್ತಿವೆ.

ಪಾಪ! ಬಿಳಿಮಂಡೆ ಮುದುಕಿಗೆ ಅಡಗಿಕೊಳ್ಳಲು ಅಲ್ಲೀಗ ಸ್ವಲ್ಪವೂ ಜಾಗ ಉಳಿದಿಲ್ಲ. ಆದರೆ, ಹೆಸರು ಮಾತ್ರ ಇನ್ನೂ ಹಾಗೇ ಇದೆ. ಕಪ್ಪಡಿಗೆಮನೆ!

ಈಗಿನ ಅಡಿಗೆಮನೆಗೂ ಜಗುಲಿಗೂ ದೂರ ಅಷ್ಟೇ ಇದ್ದರೂ, ಅಡಿಗೆಮನೆಯಲ್ಲಿ ಸ್ಥಾನ ಪಡೆದುಕೊಂಡಿರುವ, ಗ್ಯಾಸು, ಮಿಕ್ಸರ್, ಗ್ರೈಂಡರ್, ಫ್ರಿಡ್ಜ್‌ಗಳಂತಾ ಆಧುನಿಕ ಸಲಕರಣೆಗಳಿಂದಾಗಿ ಮನೆಯೊಡತಿಗೆ ಅಡಿಗೆ ಕೆಲಸ ಬೇಗ ಮುಗಿಸಿ ಜಗುಲಿಗೆ ಹೆಬ್ಬಾಗಿಲಿಗೆ ಹೋಗಿ ಕುಳಿತು ಕೊಳ್ಳಲು ಸಮಯ ಸಿಗುತ್ತದೆ. ಅಥವಾ ಒಮ್ಮೊಮ್ಮೆ ಜಗುಲಿಯೇ ಅಡಿಗೆಮನೆಗೆ ಬಂದು ಕೂರುತ್ತದೆ! ಅಂದರೆ, ಹಿಂದಿನ ಕಾಲದಲ್ಲಿ ಮನೆಯ ಗಂಡಸರು ಊಟ ತಿಂಡಿ ಮುಗಿಸಿ ಕೈ ತೊಳೆದವರೇ ನೆಟ್ಟಗೆ ಜಗುಲಿಗೇ ಹೋಗಿ ಕೂರುತ್ತಿದ್ದರು. ಆದರೀಗ ಹೆಂಡತಿ ಉಂಡು ಕೆಲಸ ಮುಗಿಸುವವರೆಗಾದರೂ ಅಡಿಗೆಮನೆಯ ಬಳಿಗೆ ಹಾಜರಿರುತ್ತಾರೆ!

